## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಬಳ್ಳಾರಿ ಜಿಲ್ಲೆಯ ಹಡಗಲಿ ತಾಲ್ಲೂಕಿನ ದೇವಗೊಂಡನಹಳ್ಳಿ ಗ್ರಾಮ ಪಂಚಾಯಿತಿಯ ಅಧ್ಯಕ್ಷರಾದ ಶ್ರೀಮತಿ ಸವಿತಾ ಭೀಮಪ್ಪ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ 43(ಎ)ಮತ್ತು 48(4)ರನ್ವಯ ಕ್ರಮ ಜರುಗಿಸುವ ಬಗ್ಗೆ.

**ಓದಲಾಗಿದೆ:**

1) ವಿಚಾರಣಾಧಿಕಾರಿಗಳು ಹಾಗೂ ಪ್ರಾದೇಶಿಕ ಆಯುಕ್ತರು, ಕಲಬುರಗಿ ವಿಭಾಗ, ಕಲಬುರಗಿ ಇವರ ಪತ್ರ ಸಂಖ್ಯೆ:ಕಂ/ಪ್ರಾಆಕ/ಜಿಪಂ/58/2019-20, ದಿನಾಂಕ:10.10.2019.
2) ಪ್ರಾದೇಶಿಕ ಆಯುಕ್ತರು, ಕಲಬುರಗಿ ವಿಭಾಗ, ಕಲಬುರಗಿ ಇವರ ವಿಚಾರಣಾ ನೋಟಿಸ್, ದಿನಾಂಕ:22.08.2019
3) ಶ್ರೀಮತಿ ಸವಿತಾ ಭೀಮಪ್ಪ, ಅಧ್ಯಕ್ಷರು, ದೇವಗೊಂಡನಹಳ್ಳಿ ಗ್ರಾಮ ಪಂಚಾಯಿತಿ, ಹಡಗಲಿ ತಾಲ್ಲೂಕು, ಬಳ್ಳಾರಿ ಜಿಲ್ಲೆ ಇವರು ಕಾರಣ ಕೇಳುವ ನೊಟೀಸ್‌ಗೆ ಲಿಖಿತ ಹೇಳಿಕೆ, ದಿನಾಂಕ:23.09.2019.

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ(1)ರಲ್ಲಿ ಶ್ರೀಮತಿ ಸವಿತಾ ಭೀಮಪ್ಪ, ಅಧ್ಯಕ್ಷರು, ದೇವಗೊಂಡನಹಳ್ಳಿ ಗ್ರಾಮ ಪಂಚಾಯಿತಿ, ಹಡಗಲಿ ತಾಲ್ಲೂಕು, ಬಳ್ಳಾರಿ ಜಿಲ್ಲೆ ಇವರು ಮತ್ತು ಸಂಬಂಧಪಟ್ಟ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರನ್ವಯ ಕರ್ತವ್ಯ ನಿರ್ವಹಿಸದೇ ನಿಯಮಗಳನ್ನು ಪಾಲಿಸದೇ ಅರ್ಥಿಕ ದುರ್ನಡತೆ ಎಸಗಿದ್ದಾರೆ ಎನ್ನಲಾದ ಆರೋಪಗಳ ಕುರಿತು ವಿಚಾರಣಾ ವರದಿಯಲ್ಲಿ ಮೇಲ್ನೋಟಕ್ಕೆ ಕಂಡುಬರುತ್ತದೆಂದು ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಆಧಿನಿಯಮ 43(ಎ) ಮತ್ತು 48(4)ರನ್ವಯ ಕ್ರಮ ಜರುಗಿಸುವ ಕುರಿತು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (2) ರಲ್ಲಿ ಸದರಿಯವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993 ರ ಪ್ರಕರಣ 43-ಎ(iii) ಮತ್ತು 48(4) ರಡಿ ಕ್ರಮ ವಹಿಸುವ ಪೂರ್ವದಲ್ಲಿ ನಿಯಮಾನುಸಾರ ಕಾರಣ ಕೇಳುವ ನೋಟೀಸನ್ನು ದಿನಾಂಕ:22.08.2019

ಮೇಲೆ ಓದಲಾದ ಕ್ರಮ ಸಂಖ್ಯೆ: (3) ರಲ್ಲಿ ಸದರಿಯವರು ಕಾರಣ ಕೇಳುವ ನೋಟೀಸಿಗೆ ಈ ಕೆಳಕಂಡಂತೆ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ.

- ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು 2006ರ ನಿಯಮಗಳು 77(ಅ) ರಡಿಯಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ನಿರ್ವಹಿಸಿದ ತುರ್ತು ಕಾಮಗಾರಿಗಳಾಗಿರುತ್ತವೆ ಹಾಗೂ ಕೂಲಿಕಾರರ ನಗದನ್ನು ಪಾವತಿಸಿದರೆ ಮಾತ್ರ ಕೆಲಸ ಮಾಡುವುದಾಗಿ ತಿಳಿಸಿರುವುದರಿಂದ ನಿಯಮ 49ರನ್ವಯ ಕೂಡಲೇ ಪಾವತಿಸಬೇಕಾದ ಪ್ರಸಂಗವೆಂದು ಪರಿಗಣಿಸಿ ಚೆಕ್ಕನ್ನು ನಗದೀಕರಿಸಿ ಪಾವತಿಸಲಾಗಿದೆ. ಈ ಕುರಿತು ಓಚರ್‌ಗಳನ್ನು ತನಿಖಾ ಸಂದರ್ಭದಲ್ಲಿ ಹಾಜರುಪಡಿಸಲಾಗಿದೆ. ಯಾವುದೇ ಹಣ ದುರುಪಯೋಗವಾಗಿರುವುದಿಲ್ಲವಾದರಿಂದ ಆರೋಪವನ್ನು ಕೈ ಬಿಡಲು ಕೋರಿರುತ್ತಾರೆ.
- ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು, 2006ರ ನಿಯಮ 25(4) ಅನ್ವಯ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಕರ ವಸೂಲಿ ಮೊತ್ತವು ಪ್ರತಿ ದಿನ ಬ್ಯಾಂಕಿಗೆ ಸಂದಾಯವಾಗಿರುವ ಬಗ್ಗೆ ಪರಿಶೀಲಿಸಿ ಖಚಿತಪಡಿಸಿಕೊಳ್ಳತಕ್ಕದ್ದು. ಪಂಚಾಯತ್ ರಾಜ್ ಅಭಿವೃದ್ಧಿ ಅಧಿಕಾರಿಗಳು ಈ ಜವಾಬ್ದಾರಿಯನ್ನು

ನಿರ್ವಹಿಸಿರುವುದಿಲ್ಲ. ಆದರೆ, ಲೆಕ್ಕಪರಿಶೋಧನಾ ವರದಿಯಿಂದ ಕರ ವಸೂಲಿ ಮೊತ್ತವು ಜಮೆ ಮಾಡದಿರುವ ಬಗ್ಗೆ ಮಾಹಿತಿ ಬಂದಿದ್ದು, ಸಂಬಂಧಪಟ್ಟ ಕರವಸೂಲಿಗಾರರಿಗೆ ನೋಟೀಸ್ ಜಾರಿಗೊಳಿಸಿ ವಸೂಲಿ ಮಾಡಲು ಸೂಚಿಸಿರುತ್ತೇನೆ. ಆದ್ದರಿಂದ ಮೊತ್ತವು ವಸೂಲಿಯಾಗಿದ್ದು, ಉಳಿದ ಮೊತ್ತವು ಶೀಘ್ರದಲ್ಲೇ ವಸೂಲಿಯಾಗುವುದು ಎಂದು ತಿಳಿಸಿರುತ್ತಾರೆ.

- ಗ್ರಾಮ ಪಂಚಾಯಿತಿಗೆ ಸೇರಿದ ವಾಣಿಜ್ಯ ಮಳಿಗೆಗಳ ಬಾಡಿಗೆ ಮೊತ್ತವನ್ನು ವಸೂಲಿ ಮಾಡಲು ನೋಟೀಸ್‌ನ್ನು ಜಾರಿಗೊಳಿಸಲಾಗಿದ್ದು, ವಸೂಲಾಗದಿದ್ದರೆ ಮುಂದಿನ ಕಾನೂನು ಕ್ರಮ ಕೈಗೊಳ್ಳಲು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ಸೂಚಿಸಿರುತ್ತೇನೆ.
- ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು, 2006ರ ನಿಯಮ 43ರನ್ವಯ ಬಿಲ್ಲು/ಓಚರ್‌ಗಳನ್ನು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ವಶದಲ್ಲಿರುತ್ತವೆ. ಅವುಗಳನ್ನು ಲೆಕ್ಕಪರಿಶೋಧನೆಗೆ ಅಥವಾ ತನಿಖೆಗೆ ಹಾಜರುಪಡಿಸುವುದು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಜವಾಬ್ದಾರಿಯಾಗಿರುತ್ತವೆ. ಅವರು ಹಾಜರುಪಡಿಸದಿದ್ದಲ್ಲಿ ಆಕ್ಷೇಪಣೆಯಾಗಿರುತ್ತದೆ. ವಿನಃ ಹಣದುರುಪಯೋಗ ಎಂದು ಪರಿಗಣಿಸಿರುವುದಿಲ್ಲ. ಆದ್ದರಿಂದ ನನ್ನ ಮೇಲಿನ ಆರೋಪವನ್ನು ಕೈಬಿಡಲು ಕೋರಿದೆ.
- ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು, 2006ರ ನಿಯಮ 49ರನ್ವಯ ಕೂಡಲೇ ಹಣವನ್ನು ಪಾವತಿಸಬೇಕಾದ ಪ್ರಸಂಗವಾಗಿದ್ದು, ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ನಿರ್ವಹಿಸಿದ ತುರ್ತು ಕಾಮಗಾರಿಗಳಾಗಿರುತ್ತವೆ. ಪ್ರತಿಯೊಂದಕ್ಕೂ ನಿಯಮ 43 ರಂತೆ ಓಚರ್‌ಗಳು ಲಭ್ಯವಿರುತ್ತದೆ ಹಾಗೂ ನಿಯಮ 47ರಂತೆ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಂದ ಪರಿಶೀಲನೆಗೆ ಒಳಗಾಗಿರುತ್ತವೆ. ಆದ್ದರಿಂದ ಹಣ ದುರುಪಯೋಗವಾಗಿರುವುದಿಲ್ಲ.
- ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು, 2006ರ ನಿಯಮ 49ರನ್ವಯ ಕೂಡಲೇ ಹಣವನ್ನು ಪಾವತಿಸಬೇಕಾದ ಪ್ರಸಂಗವಾಗಿದ್ದು, ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ನಿರ್ವಹಿಸಿದ ತುರ್ತು ಕಾಮಗಾರಿಗಳಾಗಿರುತ್ತವೆ. ಪ್ರತಿಯೊಂದಕ್ಕೂ ನಿಯಮ 43 ರಂತೆ ಓಚರ್‌ಗಳು ಲಭ್ಯವಿರುತ್ತದೆ ಹಾಗೂ ನಿಯಮ 47ರಂತೆ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಂದ ಪರಿಶೀಲನೆಗೆ ಒಳಗಾಗಿರುತ್ತವೆ. ಆದ್ದರಿಂದ ಹಣ ದುರುಪಯೋಗವಾಗಿರುವುದಿಲ್ಲ.
- 2015-16ನೇ ಸಾಲಿನ ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ದನದ ಕೊಟ್ಟಿಗೆ ನಿರ್ಮಾಣ ಕಾಮಗಾರಿಯಲ್ಲಿ 05 ದನದ ಕೊಟ್ಟಿಗಳು ಅಪೂರ್ಣಗೊಂಡಿರುವುದಾಗಿ, 10 ದಿನದ ಕೊಟ್ಟಿಗೆಗಳು ಭೌತಿಕ ನಿರ್ಮಾಣವಾಗದೇ ಇದ್ದರೂ ಒಟ್ಟಾರೆ ರೂ.2,35,400/- ಗಳನ್ನು ನಿಯಮಬಾಹಿರವಾಗಿ ಪಾವತಿಸಿರುವುದಾಗಿ ಅರೋಪಿಸಲಾಗಿದೆ. ಸದರಿ ಯೋಜನೆಯಡಿ ದನದ ಕೊಟ್ಟಿಗೆ ನಿರ್ಮಿಸದೇ ಹಣ ಪಾವತಿಸಿರುವುದಾಗಿ ತಮ್ಮ ಗಮನಕ್ಕೆ ಬಂದಿರುವುದಿಲ್ಲ, ಅಂತಹ ಫಲಾನುಭವಿಗಳ ವಿವರ ನೀಡಲು ಕೋರಿರುವುದಾಗಿ ತಿಳಿಸುತ್ತಾರೆ, ವಿವಿಧ ಯೋಜನೆಗಳ ಅನುಷ್ಠಾನದಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕಿರಿಯ/ ಸಹಾಯಕ ಅಭಿಯಂತರರು ಮತ್ತು ತಾಂತ್ರಿಕ ಸಹಾಯಕರು ಕಾಮಗಾರಿ ಪರಿಶೀಲನೆ ನಡೆಸಿ ಅಗತ್ಯ ದಾಖಲೆಗಳನ್ನು ತಯಾರಿಸಿ ಪರಿಶೀಲಿಸಿದ ನಂತರವಷ್ಟೆ ಹಣ ಪಾವತಿಸಲು ಅವಕಾಶವಿರುತ್ತದೆ ಎಂದು ತಿಳಿಸಿರುತ್ತಾರೆ.

ಸದರಿ ಪ್ರಕರಣದಲ್ಲಿ ಶ್ರೀ ನಂದಿಹಳ್ಳಿ ಮಹೇಂದ್ರ, ದೇವಗೊಂಡನಹಳ್ಳಿ ಗ್ರಾಮ ಇವರು ನೀಡಿದ ದೂರಿನ ಹಿನ್ನಲೆಯಲ್ಲಿ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ, ಹಡಗಲಿ ಇವರು ಸಹಾಯಕ ಲೆಕ್ಕಾಧಿಕಾರಿಗಳನ್ನೊಂಡ ತಂಡದವರಿಂದ ತನಿಖೆ ನಡೆಸಿ ಸಲ್ಲಿಸಿರುವ ವರದಿಯನ್ನು ಉಲ್ಲೇಖಿಸಿ ಪುನ: ಜಿಲ್ಲಾ ಪಂಚಾಯಿತಿ ಲೆಕ್ಕಾ ವಿಭಾಗದಿಂದ ವಿಶೇಷ ಅಂತರೀಕ ಲೆಕ್ಕ ತನಿಖೆ ನಡೆಸಿ ಸಲ್ಲಿಸಿರುವ ತನಿಖಾ ವರದಿಯಲ್ಲಿ ಈ ಕೆಳಕಂಡ ಅಂಶಗಳು ಕಂಡುಬರುತ್ತವೆ.

**ವಿಚಾರಣಾ ಅಧಿಕಾರಿಗಳ ಅಂಶಗಳು:-**

- ಕರ್ನಾಟಕ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು.2006ರ ನಿಯಮ 49ರ ಅನುಸಾರ ಗುತ್ತಿಗೆದಾರರಿಗೆ ಸರಬರಾಜುದಾರರಿಗೆ ಮತ್ತು ಇತರರಿಗೆ ಸಂದಾಯ ಮಾಡಬೇಕಾದ ಪಾವತಿಯನ್ನು ಅವರ ಹೆಸರಿನಲ್ಲಿ ಅಕೌಂಟ್ ಪೇಯಿ ಚೆಕ್ ಮುಖಾಂತರವೇ

ನೀಡತಕ್ಕದ್ದು, ಆದರೆ ವಿವಿಧ ವೆಚ್ಚಗಳಿಗೆ ಸಂಬಂಧಿಸಿದಂತೆ 2016-17ನೇ ಸಾಲಿನಲ್ಲಿ 32 ನೌಕರರ ಹೆಸರಿನಲ್ಲಿ ಒಟ್ಟು ರೂ. 1,18,939/-ಗಳ ಚೆಕ್ಕುಗಳನ್ನು ನಿಯಮಬಾಹಿರವಾಗಿ ಚೆಕ್ಕುಗಳನ್ನು ನಗದಿಕರಿಸಿರುವುದು ಕಂಡು ಬರುತ್ತದೆ. ಅದೇ ರೀತಿ 2017-18ನೇ ಸಾಲಿನಲ್ಲಿ ಒಟ್ಟು 32 ಗ್ರಾಮ ಪಂಚಾಯಿತಿ ನೌಕರರ ಹೆಸರಿನಲ್ಲಿ ಒಟ್ಟು ರೂ. 1,18,228/- ಗಳನ್ನು ನಗದಿಕರಿಸಿರುವುದು ಹಾಗೂ 2018-19ನೇ ಸಾಲಿನಲ್ಲಿ ಒಟ್ಟು 34 ಗ್ರಾಮ ಪಂಚಾಯಿತಿ ನೌಕರರ ಹೆಸರಿನಲ್ಲಿ ಒಟ್ಟು ರೂ.1,42,472/-ಗಳನ್ನು ನಗದೀಕರಿಸಿರುವುದು ಕಂಡುಬರುತ್ತದೆ ಎಂದು ವರದಿ ನೀಡಿರುತ್ತಾರೆ.

- ಕರ್ನಾಟಕ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು, 2006ರ ನಿಯಮ 19ರ ಅನುಸಾರ ನಗದು ವಸೂಲಾತಿಯನ್ನು ಗ್ರಾಮ ಪಂಚಾಯಿತಿಯ ಬ್ಯಾಂಕ್ ಖಾತೆಗೆ ಮರು ದಿವಸವೇ ಜಮಾ ಮಾಡತಕ್ಕದ್ದು. ಆದರೆ ಗ್ರಾಮ ಪಂಚಾಯಿತಿಯ ವಸೂಲಿ ಮಾಡಿದ ಆದಾಯವನ್ನು ಗ್ರಾಮ ಪಂಚಾಯಿತಿ ನಿಧಿಗೆ ಜಮ ಮಾಡದೇ ಸಂಬಂಧಪಟ್ಟ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಒಟ್ಟು ವಸೂಲಿಯಾದ ಮೊತ್ತ ರೂ.15,41,068/-ಗಳಲ್ಲಿ ರೂ.13,54,583/-ಗಳನ್ನು ಬ್ಯಾಂಕ್‌ಗೆ ಜಮಾ ಮಾಡಿ ಇನ್ನೂ ಒಟ್ಟು ಮೊತ್ತ ರೂ.1,86,485/-ಗಳನ್ನು ಉಳಿಸಿಕೊಂಡಿರುವುದು ಕಂಡು ಬಂದಿರುವುದಾಗಿ ವರದಿ ಸಲ್ಲಿಸಿರುತ್ತಾರೆ.

- ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 200ರಲ್ಲಿ ಸೂಚಿಸಿದಂತೆ ಗ್ರಾಮ ಪಂಚಾಯಿತಿಗೆ ಬರಬೇಕಾದ ಯಾವುದೇ ಬಾಕಿಯನ್ನು ವಸೂಲಿ ಮಾಡಲು ಬಾಕಿ ಇರುವ ಮೊಬಲಗಿಗೆ ಒಂದು ಬಿಲ್ಲನ್ನು ಮತ್ತು ತಗಾದೆ ಆದೇಶವನ್ನು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಜಾರಿಗೊಳಿಸಿ ವಸೂಲಾತಿಗೆ ಕ್ರಮ ಕೈಗೊಳ್ಳಬೇಕಿರುತ್ತದೆ. ಆದರೆ, ವಾಣಿಜ್ಯ ಮಳಿಗೆಗಳ ಬಾಡಿಗೆ ಮೊತ್ತವು ಒಟ್ಟು ರೂ.1,08,800/-ಗಳನ್ನು ವಸೂಲಿಗಾಗಿ ಬಾಕಿ ಇರುವುದು ಕಂಡು ಬರುತ್ತದೆ ಎಂದು ವರದಿ ಮಾಡಿರುತ್ತಾರೆ.

- 2015-16 ಮತ್ತು 2016-17ನೇ ಸಾಲಿನಲ್ಲಿ 13ನೇ ಹಣಕಾಸು ಯೋಜನೆಯಡಿಯಲ್ಲಿ (ಬ್ಯಾಂಕ್ ಖಾತೆ ಸಂಖ್ಯೆ: 64061950772) ರಿಂದ ಪಾವತಿಯಾದ ಒಟ್ಟು ಮೊತ್ತ ರೂ.8,28,349/-ಗಳಿಗೆ ಓಚರ್‌ಗಳನ್ನು ಪರಿಶೀಲನೆಗೆ ಹಾಜರುಪಡಿಸಿರುವುದಿಲ್ಲವೆಂದು ವರದಿ ಮಾಡಿರುತ್ತಾರೆ.

- ಕುಡಿಯುವ ನೀರು ಯೋಜನೆಯಡಿ (ಬ್ಯಾಂಕ್ ಖಾತೆ ಸಂಖ್ಯೆ: 10665100010526, ಕೆ.ಜಿ.ಬಿ. ಹೂವಿನ ಹಡಗಲಿ) 2015-16 ಮತ್ತು 2016-17ನೇ ಸಾಲಿನಲ್ಲಿ ಭರಿಸಲಾದ ಒಟ್ಟು ರೂ.1,08,225/-ಗಳನ್ನು ಸಿಬ್ಬಂದಿಗೆ ಹೆಸರಿನಲ್ಲಿ ಚೆಕ್ ನೀಡಿರುವುದು ಕಂಡು ಬರುತ್ತದೆ ಎಂದು ವರದಿ ಮಾಡಿರುತ್ತಾರೆ.

- 2016-17ನೇ ಸಾಲಿನಲ್ಲಿ 14ನೇ ಹಣಕಾಸು ಯೋಜನೆಯ ಅಡಿಯಲ್ಲಿ ಎಸ್.ಸಿ./ಎಸ್.ಟಿ. ವಿದ್ಯಾರ್ಥಿಗಳಿಗೆ ಬುಕ್ ಬಿಲ್ ಪಾವತಿಸಲು ರೂ.50,000/- ವಿದ್ಯಾರ್ಥಿಗಳಿಗೆ ನೀಡುವ ಬದಲಾಗಿ, ಗ್ರಾಮ ಪಂಚಾಯಿತಿ ಸಿಬ್ಬಂದಿ ಹೆಸರಿನಲ್ಲಿ ಚೆಕ್ಕುಗಳನ್ನು ನಿಯಮಬಾಹಿರವಾಗಿ ನಗದೀಕರಣಗೊಳಿಸಿರುವುದು ಕಂಡು ಬರುತ್ತದೆ ಎಂದು ವರದಿ ಮಾಡಿರುತ್ತಾರೆ.

- ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯ ಕ್ರ.ಸಂ.7ರ ಕಾಮಗಾರಿ ಕ್ರ.ಸಂ.1ರ ಅಂದಾಜು ಪಟ್ಟಿಗೆ ತಾಂತ್ರಿಕ ಮತ್ತು ಆಡಳಿತಾತ್ಮಕ ಮಂಜೂರಾತಿ ಪಡೆದಿರುವುದಿಲ್ಲ. ಉಳಿದ ಕ್ರ.ಸಂ. 2, 3, 4, 5 ಗಳ ಕಾಮಗಾರಿಗಳ ಅಳತೆಯನ್ನು ದಾಖಲಿಸಿರುವುದಿಲ್ಲದಿರುವುದು ಕಂಡು ಬರುತ್ತದೆ ಎಂದು ವರದಿಯಲ್ಲಿ ತಿಳಿಸಿರುತ್ತಾರೆ. ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗೆ ಸಂಬಂಧಿಸಿದಂತೆ, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಹಡಗಲಿ ಇವರು ಸಲ್ಲಿಸಿದ ತನಿಖಾ ವರದಿಯಲ್ಲಿ ಉಲ್ಲೇಖಿಸಿದಂತೆ ಅನುಷ್ಠಾನಗೊಂಡ ದನದ ಕೊಟ್ಟಿಗೆಗಳಲ್ಲಿ 2015-16 ರಇಂದ 2018-19ನೇ ಸಾಲಿನವರೆಗೆ ಒಟ್ಟು 70 ದನದ ಕೊಟ್ಟಿಗೆಗಳ ಪೈಕಿ ಅಪೂರ್ಣಗೊಂಡ (ಪ್ರಗತಿಯಲ್ಲಿರುವ)05 ದನದ ಕೊಟ್ಟಿಗೆಗಳು ಹಾಗೂ ನಿರ್ಮಾಣವಾಗದೇ ಇರುವ 10 ದನದ ಕೊಟ್ಟಿಗೆಗಳ ಕಡತಗಳಲ್ಲಿ ನಿರ್ವಹಿಸಬೇಕಾಗಿರುವ ಲೆಕ್ಕ ಪತ್ರ ದಾಖಲೆಗಳು ಲಭ್ಯವಿರುತ್ತವೆಂದು ತನಿಖಾಧಿಕಾರಿಗಳು ತಿಳಿಸಿರುವುದು ಕಂಡುಬರುತ್ತದೆ.

*ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು, 2006ರ ನಿಯಮ 62ರನ್ವಯ ಗ್ರಾಮ ಪಂಚಾಯಿತಿಯ ಅಧ್ಯಕ್ಷನು ಗ್ರಾಮ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕನಾಗಿರತಕ್ಕದ್ದು ಮತ್ತು ಅವನು ಅಧಿನಿಯಮದ ಯಾವುದೇ ಇತರ ಉಪಬಂಧದ ಅಥವಾ ಅದರಡಿಯಲ್ಲಿ ರಚಿಸಿರುವ ನಿಯಮಗಳ ಅಡಿಯಲ್ಲಿ ಚಲಾಯಿಸಬಹುದಾದ ಪ್ರಕಾರ್ಯಗಳು ಮತ್ತು ಅಧಿಕಾರಗಳ ಜೊತೆಗೆ ಗ್ರಾಮ ಪಂಚಾಯಿತಿಯ ದಾಖಲೆಗಳನ್ನು ನೋಡುವುದು ಅವನ ಕರ್ತವ್ಯವಾಗಿರುತ್ತದೆ ಹಾಗೂ ಗ್ರಾಮ*

*ಪಂಚಾಯಿತಿ ಹಣಕಾಸಿನ ವ್ಯವಹಾರಗಳ ಅಧಿಕಾರವನ್ನು ಗ್ರಾಮ ಪಂಚಾಯಿತಿಯ ಅಧ್ಯಕ್ಷ ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯು ಜಂಟಿಯಾಗಿ ನಿರ್ವಹಿಸಬೇಕಾಗುತ್ತದೆ. ಅಲ್ಲದೇ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 286ರನ್ವಯ ಗ್ರಾಮ ಪಂಚಾಯಿತಿಯ ಪ್ರತಿಯೊಬ್ಬ ಸದಸ್ಯನು 'ಲೋಕ ನೌಕರ' ನಾಗಿರುತ್ತಾನೆ.*

ಲಭ್ಯವಿರುವ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಲಾಗಿ, ಬಳ್ಳಾರಿ ಜಿಲ್ಲೆ, ಹಡಗಲಿ ತಾಲ್ಲೂಕಿನ ದೇವಗೊಂಡನಹಳ್ಳಿ ಗ್ರಾಮ ಪಂಚಾಯಿತಿಯ ಅಧ್ಯಕ್ಷರಾದ ಶ್ರೀಮತಿ ಸವಿತಾ ಭೀಮಪ್ಪ ಇವರು ಹಾಗೂ ಸಂಬಂಧಪಟ್ಟ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಕರ್ನಾಟಕ ಗ್ರಾಮ ಸ್ವರಾಜ್ ಅಧಿನಿಯಮ, 1993ರನ್ವಯ ಕರ್ತವ್ಯ ನಿರ್ವಹಿಸದೇ, ನಿಯಮಗಳನ್ನು ಪಾಲಿಸದೇ ಆರ್ಥಿಕ ದುರ್ನಡತೆ ಎಸಗಿದರೆನ್ನಲಾದ ಆರೋಪಗಳು ವಿಚಾರಣಾಧಿಕಾರಿಗಳು ಮತ್ತು ಪ್ರಾದೇಶಿಕ ಆಯುಕ್ತರು, ಕಲಬುರಗಿ ವಿಭಾಗ, ಕಲಬುರಗಿ ಇವರು ವಿಚಾರಣೆಯಿಂದ ಸಾಬೀತಾಗಿರುವುದರಿಂದ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 43(ಎ) ಮತ್ತು 48(4)ರನ್ವಯ ಶ್ರೀಮತಿ ಸವಿತಾ ಭೀಮಪ್ಪ, ಅಧ್ಯಕ್ಷರು, ದೇವಗೊಂಡನಹಳ್ಳಿ ಗ್ರಾಮ ಪಂಚಾಯಿತಿ, ಹಡಗಲಿ ತಾಲ್ಲೂಕು, ಬಳ್ಳಾರಿ ಜಿಲ್ಲೆ ಇವರನ್ನು ಸದರಿ ಗ್ರಾಮ ಪಂಚಾಯಿತಿಯ ಅಧ್ಯಕ್ಷ ಸ್ಥಾನ ಮತ್ತು ಸದಸ್ಯ ಸ್ಥಾನದಿಂದ ತೆಗೆದು ಹಾಕಲು ಹಾಗೂ ಸದರಿ ಅಧಿನಿಯಮದ ಪ್ರಕರಣ 157(2) ಮತ್ತು 246(8)ರಡಿ ದುರುಪಯೋಗ ಪಡಿಸಿಕೊಂಡಿರುವ ಮೊತ್ತವನ್ನು ಸಂಬಂಧಪಟ್ಟವರ ಮೇಲೆ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ ವಸೂಲು ಮಾಡಲು ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಹಡಗಲಿ ಇವರಿಗೆ ಆದೇಶಿಸಲು ಮತ್ತು ಹಣ ದುರುಪಯೋಗಕ್ಕೆ ಕಾರಣರಾದ ಸಂಬಂಧಿಸಿದ ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರ ವಿರುದ್ಧ ನಿಯಮಾನುಸಾರ ಶಿಸ್ತು ಕ್ರಮ ಜರುಗಿಸುವಂತೆ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ, ಜಿಲ್ಲಾ ಪಂಚಾಯಿತಿ, ಬಳ್ಳಾರಿ ಇವರಿಗೆ ಆದೇಶಿಸಲು ನಿರ್ಣಯಿಸಿದೆ.

ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/859/ಗ್ರಾಪಂಅ/2019**
**ಬೆಂಗಳೂರು, ದಿನಾಂಕ: 16-12-2019.**

ಈ ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಲಭ್ಯವಿರುವ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಲಾಗಿ, ಆಪಾದಿತ ಅಧ್ಯಕ್ಷರಾದ ಶ್ರೀಮತಿ ಸವಿತಾ ಭೀಮಪ್ಪ, ಅಧ್ಯಕ್ಷರು, ದೇವಗೊಂಡನಹಳ್ಳಿ ಗ್ರಾಮ ಪಂಚಾಯಿತಿ, ಹಡಗಲಿ ತಾಲ್ಲೂಕು, ಬಳ್ಳಾರಿ ಜಿಲ್ಲೆ ಇವರು ಕರ್ನಾಟಕ ಗ್ರಾಮ ಸ್ವರಾಜ್ ಅಧಿನಿಯಮ, 1993ರನ್ವಯ ಕರ್ತವ್ಯ ನಿರ್ವಹಿಸದೇ, ನಿಯಮಗಳನ್ನು ಪಾಲಿಸದೇ ಆರ್ಥಿಕ ದುರ್ನಡತೆ ಎಸಗಿದರೆನ್ನಲಾದ ಆರೋಪಗಳು ವಿಚಾರಣಾಧಿಕಾರಿಗಳು ಮತ್ತು ಪ್ರಾದೇಶಿಕ ಆಯುಕ್ತರು, ಕಲಬುರಗಿ ವಿಭಾಗ, ಕಲಬುರಗಿ ಇವರು ವಿಚಾರಣೆಯಿಂದ ಸಾಬೀತಾಗಿರುವುದರಿಂದ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 43(ಎ) ಮತ್ತು 48(4)ರನ್ವಯ ಶ್ರೀಮತಿ ಸವಿತಾ ಭೀಮಪ್ಪ, ಅಧ್ಯಕ್ಷರು, ದೇವಗೊಂಡನಹಳ್ಳಿ ಗ್ರಾಮ ಪಂಚಾಯಿತಿ, ಹಡಗಲಿ ತಾಲ್ಲೂಕು, ಬಳ್ಳಾರಿ ಜಿಲ್ಲೆ ಇವರನ್ನು ದೇವಗೊಂಡನಹಳ್ಳಿ ಗ್ರಾಮ ಪಂಚಾಯಿತಿಯ ಅಧ್ಯಕ್ಷ ಸ್ಥಾನ ಮತ್ತು ಸದಸ್ಯ ಸ್ಥಾನದಿಂದ ತೆಗೆದು ಹಾಕಿ ಸರ್ಕಾರವು ಆದೇಶಿಸಿದೆ.

ಮುಂದುವರೆದು, ಸದರಿ ಅಧಿನಿಯಮದ ಪ್ರಕರಣ 157(2) ಮತ್ತು 246(8)ರಡಿ ದುರುಪಯೋಗ ಪಡಿಸಿಕೊಂಡಿರುವ ಮೊತ್ತವನ್ನು ಸಂಬಂಧಪಟ್ಟವರ ಮೇಲೆ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ ವಸೂಲು ಮಾಡಲು ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಹಡಗಲಿ ಇವರಿಗೆ ಆದೇಶಿಸಿದೆ ಮತ್ತು ಹಣ ದುರುಪಯೋಗಕ್ಕೆ ಕಾರಣರಾದ ಸಂಬಂಧಿಸಿದ ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರ ವಿರುದ್ಧ ನಿಯಮಾನುಸಾರ ಶಿಸ್ತು ಕ್ರಮ ಜರುಗಿಸಲು ಮುಖ್ಯ ಕಾರ್ಯನಿರ್ವಾಹಣಾಧಿಕಾರಿ, ಜಿಲ್ಲಾ ಪಂಚಾಯಿತಿ, ಬಳ್ಳಾರಿ ಇವರಿಗೆ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

16/12/19

(ರಮೇಶ್ ಡಿ.ಎ.)
ಉಪನಿರ್ದೇಶಕರು ಮತ್ತು ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಗೆ:**

1. ಕಾರ್ಯದರ್ಶಿ, ರಾಜ್ಯ ಚುನಾವಣಾ ಆಯೋಗ, ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು.

2. ಮುಖ್ಯ ಕಾರ್ಯನಿರ್ವಾಹಕಾಧಿಕಾರಿ, ಜಿಲ್ಲಾ ಪಂಚಾಯಿತಿ, ಬಳ್ಳಾರಿ ಜಿಲ್ಲೆ.
3. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಹಡಗಲಿ ತಾಲ್ಲೂಕು, ಬಳ್ಳಾರಿ ಜಿಲ್ಲೆ.
4. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ದೇವಗೊಂಡನಹಳ್ಳಿ ಗ್ರಾಮ ಪಂಚಾಯಿತಿ, ಹಡಗಲಿ ತಾಲ್ಲೂಕು, ಬಳ್ಳಾರಿ ಜಿಲ್ಲೆ.
5. ಶ್ರೀಮತಿ ಸವಿತಾ ಭೀಮಪ್ಪ, ಅಧ್ಯಕ್ಷರು, ದೇವಗೊಂಡನಹಳ್ಳಿ ಗ್ರಾಮ ಪಂಚಾಯಿತಿ, ಹಡಗಲಿ ತಾಲ್ಲೂಕು, ಬಳ್ಳಾರಿ ಜಿಲ್ಲೆ.
6. ಗಣಕ ಕೋಶ–ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
7. ಕಛೇರಿ ಪ್ರತಿ/ಹೆಚ್ಚುವರಿ ಪ್ರತಿ.

ಪ್ರತಿಯನ್ನು ಮಾಹಿತಿಗಾಗಿ:

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ನಿರ್ದೇಶಕರು(ಪಂ.ರಾಜ್–1) ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಸಹಾಯಕರು.